ಭಕ್ತಿಯ ಜತೆ ಈ ಸಾಮರ್ಥ್ಯಗಳನ್ನು ಹೊರತರಬಲ್ಲ ಆಧ್ಯಾತ್ಮಿಕ ಜಾಗೃತಿ ನಮ್ಮಲ್ಲಿ ಉಂಟಾಗಬೇಕು.

ಈ ವರ್ಷ ತಿರುವೈಯಾರಿನ ತ್ಯಾಗರಾಜ ಆರಾಧನೆಯಲ್ಲಿ ನಾನೂ ಪಾಲ್ಗೊಂಡಿದ್ದೆ. ವಿವಿಧ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಿನ್ನೆಲೆ, ಹಂತಗಳ ಐದುಸಾವಿರ ಜನ ಒಗ್ಗಟ್ಟು, ಪ್ರೀತಿ, ಮಾಧುರ್ಯಗಳಿಂದ ತಮ್ಮ ನಡುವಿನ ಅಂತರಗಳನ್ನೆಲ್ಲ ಒತ್ತಟ್ಟಿಗಿಟ್ಟು ಭಕ್ತಕುಟುಂಬದ ಸದಸ್ಯರಲ್ಲಿ ಒಬ್ಬರಾಗಿ ಭಾಗವಹಿಸಿದ್ದರು. ಸರಿಯಾದ ಶಿಕ್ಷಣದಿಂದ ನಮ್ಮ ತರುಣರೆಲ್ಲರೂ ಆಧ್ಯಾತ್ಮಿಕವಾಗಿ ಬೆಳೆದಾಗ ನಮ್ಮ ದೇಶವೂ ಹೀಗೇ ಒಂದಾಗುತ್ತದೆ.

ನಮ್ಮ ದೇಶದ ಭವ್ಯ ಭವಿಷ್ಯವನ್ನು ಕುರಿತು ಸ್ವಾಮಿ ವಿವೇಕಾನಂದರು ಹಿಂಜರಿಯದ ಮಾತುಗಳಲ್ಲಿ ಹೀಗೆನ್ನುತ್ತಾರೆ: "ನನ್ನ ತಾಯಿನಾಡು, ಸ್ವರ್ಗದಲ್ಲಿನ ಅಥವಾ ಭೂಮಿಯಲ್ಲಿನ ಯಾವ ಶಕ್ತಿಯೂ ತಡೆಯಲು ಆಗದ ಧೀಮಂತ ಹೆಜ್ಜೆಗಳನ್ನು ಇಡುತ್ತ, ಮಾನವನು ತನ್ನ ಮೃಗತ್ವವನ್ನು ಹಿಂದಿಕ್ಕಿ ದೇವತ್ವವನ್ನು ಪಡೆಯುವಂತೆ ಮಾಡುವ ತನ್ನ ಗುರಿ ಸಾಧನೆಯತ್ತ, ತನ್ನ ಭವ್ಯ ಭವಿಷ್ಯದತ್ತ ಮುನ್ನಡೆಯುತ್ತಿರುವುದನ್ನು ನಾನು ಕಾಣುತ್ತಿದ್ದೇನೆ... ನಮ್ಮ ಪ್ರಾಚೀನ ವೈಭವದ ಹಿನ್ನೆಲೆಗಾಗಿ ಹೆಮ್ಮೆಪಡೋಣ. ರಾಮಚಂದ್ರನಂತಹ ನಮ್ಮ ನಾಯಕರನ್ನು ಪೂಜಿಸೋಣ. ನಾವು ಆತ್ಮವಿಶ್ವಾಸವನ್ನು ಗಳಿಸಿ ಮಹತ್ಕಾರ್ಯವನ್ನು ಸಾಧಿಸುವ ನಾಯಕರಾಗಲು ಇದು ಸಹಾಯ ಮಾಡುತ್ತದೆ."

> *ಜಗತ್ತಿನಲ್ಲಿ ಧರ್ಮವನ್ನು ಅರ್ಥಮಾಡಿಕೊಳ್ಳುವ ಒಂದೇ ಒಂದು ದೇಶವಿದೆ—ಅದೇ ಭಾರತ.*
>
> *—ಸ್ವಾಮಿ ವಿವೇಕಾನಂದ*

ಅತಿ ಸಮೃದ್ಧವಾದ ನಿಸರ್ಗ ಮತ್ತು ಮಾನವ ಸಂಪತ್ತು ಇದ್ದರೂ, ನಮ್ಮ ದೇಶವನ್ನು ಅಭಿವೃದ್ಧಿಗೊಳಿಸಲಾಗಿಲ್ಲ. ಏಕೆ? ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ನಮ್ಮ ದೀನ ದರಿದ್ರ ಜನಸಮೂಹದ ಬಗ್ಗೆ ನಮಗೆ ಪ್ರೀತಿ ಇಲ್ಲ." ತಂಜಾವೂರು ಬರ ಪರಿಹಾರ ಕಾರ್ಯದಲ್ಲಿ ನಾನು ಇದನ್ನು ಗಮನಿಸಿದೆ. ಹಸಿವಿನಿಂದ ಸತ್ತ ಪ್ರಕರಣಗಳ ಕಾರಣದ ಬಗ್ಗೆಯೇ ಜಗಳವಾಡುತ್ತ ಬಹು ಸಂಖ್ಯೆಯ ರಾಜಕಾರಣಿಗಳು ಸುತ್ತಾಡುತ್ತಿದ್ದರು. ಅವರಾರಿಗೂ ಒಂದು ಹಿಡಿ ಅನ್ನ ಹಿಡಿದು ದೀನ ಜನರತ್ತ ಹೋಗಬೇಕೆಂದು ಅನ್ನಿಸಲೇ ಇಲ್ಲ!

ಅಮೆರಿಕದ ಜನಪ್ರಿಯ ಲೇಖಕ ರಾಬರ್ಟ್ ಆರ್ನೆಟ್ ತನ್ನ *India Unveiled* ಎಂಬ ಪುಸ್ತಕದಲ್ಲಿ ಹೀಗೆನ್ನುತ್ತಾನೆ: "ಪಶ್ಚಿಮ ನೀಡಬಹುದಾದ ಎಲ್ಲ ಭೌತಿಕ ಸಂಪತ್ತು, ತಾಂತ್ರಿಕತೆಗಳಿಗಿಂತ ಭಾರತವು ತನ್ನ ಯೋಗವಿಜ್ಞಾನದಿಂದ ಅತಿ ಹೆಚ್ಚು ಮೌಲ್ಯದ ಕೊಡುಗೆ ನೀಡಿದೆ... ವಿಶ್ವದ ಎಲ್ಲ ದೇಶಗಳಿಗಿಂತ ಭಾರತ ಆಧ್ಯಾತ್ಮಿಕ ಸಂಪತ್ತಿನ ವರ ಹೊಂದಿದೆ. ಹೆಚ್ಚೆಚ್ಚು ಅಮೆರಿಕನ್ನರು ಭೌತಿಕತೆ ನಿರಂತರ ಸಂತೃಪ್ತಿಯನ್ನು ನೀಡಲಾರದೆಂದು ತಿಳಿದುಕೊಳ್ಳುತ್ತಿದ್ದಾರೆ ಮತ್ತು ಆಧ್ಯಾತ್ಮಿಕ ಮಾರ್ಗದರ್ಶನಕ್ಕಾಗಿ ಭಾರತದತ್ತ ತಿರುಗುತ್ತಿದ್ದಾರೆ."

ಸ್ವಾಮಿ ವಿವೇಕಾನಂದರು ನಾವು ಅವತಾರವರಿಷ್ಠರಾದ ಶ್ರೀರಾಮಕೃಷ್ಣರನ್ನು ಅನುಸರಿಸಬೇಕೆನ್ನುತ್ತಾರೆ: "ಆತನ ಪದತಲದಲ್ಲಿ ಕುಳಿತಾಗ ಮಾತ್ರ ಭಾರತ ಉನ್ನತಿಗೇರಬಲ್ಲುದು... ಈ ಆಯ್ಕೆ ಮಾಡಿದವ ಕೀರ್ತಿವಂತನಾಗುವನು. ತಲೆಬಾಗಿದವ ಆ ಕ್ಷಣವೇ ಪುಟವಿಟ್ಟ ಬಂಗಾರವಾಗುವನು. ಈ ಸಂದೇಶವನ್ನು ಮನೆಮನೆಗೂ ತಲುಪಿಸಿ." ❄

## ಪ್ರಹಸನಪ್ರಸಂಗ

***ನಾವು ಆಧ್ಯಾತ್ಮಿಕ ಜೀವನವನ್ನು ಅನುಸರಿಸುವುದಕ್ಕಿಂತ ಬೋಧಿಸುವುದೇ ಜಾಸ್ತಿ. ಈ ಬೋಧಿಸುವ ಅಮಲು ಹೆಚ್ಚಾದಷ್ಟೂ ಅನುಸರಿಸುವ ಪ್ರಜ್ಞೆ ಕಡಮೆಯಾಗುತ್ತ ಬರುತ್ತದೆ. ಅನುಷ್ಠಾನವಿಲ್ಲದಿದ್ದರೆ ನಾವು ಬೋಧಿಸುವುದು ನಮಗೇ ಅರ್ಥವಾಗಿರುವುದಿಲ್ಲ. "ವೇದಾಂತವೆಂದರೆ ನಮಗೆ ತಿಳಿಯದಿರುವುದನ್ನು ಇತರರಿಗೆ ಅರ್ಥವಾಗದ ರೀತಿಯಲ್ಲಿ ಹೇಳುವುದು"—ಎಂಬ ಮಾತು ಇಂಥ ಬೋಧಕರಿಗೆ ಅನ್ವಯವಾಗುತ್ತದೆ.***

ಒಬ್ಬ ಗಣಿತದ ಉಪಾಧ್ಯಾಯನಿದ್ದ. ಅವನಿಗೆ ಗಣಿತದ ಗಂಧವೆ ಇರಲಿಲ್ಲ. ಗೈಡ್ ಇಟ್ಟುಕೊಂಡು ಶಾಲೆಯಲ್ಲಿ ಗಣಿತದ ಲೆಕ್ಕ ಬಿಡಿಸುತ್ತಿದ್ದ. ಗೈಡ್‌ನಲ್ಲಿ ಹೇಗಿದೆಯೋ ಹಾಗೆಯೇ ಬೋರ್ಡ್‌ಮೇಲೆ ಬರೆಯುತ್ತಿದ್ದ.

ಒಂದು ದಿನ ಹೀಗೆ ಅವನು ಒಂದು ಲೆಕ್ಕವನ್ನು ಬೋರ್ಡಿನ ಮೇಲೆ ಬರೆದು ತೋರಿಸುತ್ತಿದ್ದ. ಒಮ್ಮೆ ಇಡೀ ಲೆಕ್ಕವನ್ನು ಬರೆದು ತೋರಿಸಿದ ಮೇಲೆ, "ಎಲ್ಲರಿಗೂ ಅರ್ಥವಾಯಿತೇ?" ಎಂದು ವಿದ್ಯಾರ್ಥಿಗಳನ್ನು ಕೇಳಿದ. ಸುಮಾರು ಅರ್ಧದಷ್ಟು ವಿದ್ಯಾರ್ಥಿಗಳು "ಅರ್ಥವಾಗಲಿಲ್ಲ, ಸಾರ್" ಎಂದು ಕೂಗಿದರು.

ಉಪಾಧ್ಯಾಯನು ಮತ್ತೊಮ್ಮೆ ಅದೇ ಲೆಕ್ಕವನ್ನು ಬರೆದು ತೋರಿಸಿ, "ಈಗಲಾದರೂ ಅರ್ಥವಾಯಿತೇನೋ?" ಎಂದು ಕೇಳಿದ. ಆಗಲೂ ಕೆಲವು ವಿದ್ಯಾರ್ಥಿಗಳು ಎದ್ದು ನಿಂತು "ಇಲ್ಲ ಸಾರ್" ಎಂದು ಕೂಗಿದರು.

ಈಗ ಉಪಾಧ್ಯಾಯನು ಮೂರನೆ ಬಾರಿ ಬರೆದು ತೋರಿಸಿದನು. ಆಗ ಒಬ್ಬ ಹುಡುಗ ಎದ್ದುನಿಂತು, "ಅರ್ಥವಾಗಲಿಲ್ಲ, ಸಾರ್" ಎಂದು ಹೇಳಿದ. ಉಪಾಧ್ಯಾಯನು ಕೋಪದಿಂದ, "***ಮುಟ್ಠಾಳ, ಈಗ ನನಗೇ ಅರ್ಥವಾಯಿತು; ನಿನಗಿನ್ನೂ ಅರ್ಥವಾಗಲಿಲ್ಲವೇನೋ?***" ಎಂದನು.